1012 (1044) ಶ್ರೀ ಹಾಲಪ್ಪ ಹೆಚ್ (ಹೊಸನಗರ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ರಾಜ್ಯದ ಶಿಕ್ಷಣ ಕೇಂದ್ರಗಳ ಮೇಲ್ವಿಚಾರಕರಿಗೆ ಹಾಗೂ ಕಾರ್ಯಕರ್ತರಿಗೆ ಗೌರವ ಧನವನ್ನು ಇದುವರೆಗೂ ನೀಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಇದುವರೆಗೂ ಗೌರವ ಧನ ನೀಡದಿರಲು ಕಾರಣಗಳೇನು,

ಇ) ಗೌರವ ಧನ ಬಿಡುಗಡೆ ಮ್ಮಾಡಲು ಕೈಗೊಂಡ ಕ್ರಮಗಳೇನು,

ಈ) ಯಾವಾಗ ಗೌರವ ಧನ ಬಿಡುಗಡೆ ಮಾಡಲಾಗುವುದು (ವಿವರ ನೀಡುವುದು)?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಸರ್ಕಾರದ ಗಮನಕ್ಕೆ ಬಂದಿದೆ

ಆ) ಮುಂದುವರಿಕೆ ಶಿಕ್ಷಣ ಕಾರ್ಯಕ್ರಮವು 5 ವರ್ಷಗಳ ಯೋಜನೆಯಾಗಿದ್ದು ಕೇಂದ್ರ ಸರ್ಕಾರದ ಪ್ರಾಯೋಜಿತ ಕಾರ್ಯಕ್ರಮವಾಗಿದೆ ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆ ಆದಂತೆಲ್ಲ ಪ್ರೇರಕರ/ ಸಹಪ್ರೇರಕರ ಗೌರವಧನವನ್ನು ನೀಡಲಾಗುತ್ತದೆ ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆ ವಿಳಂಬವಾದ ಅವಧಿಗೆ ಗೌರವಧನ ಸರ್ಕಾರದಿಂದ ಪಾವತಿಸಲು ಸಾಧ್ಯವಾಗುತ್ತಿಲ್ಲ

ಇ) ಈ ಸಂಬಂಧ ಜಾರಿಗೊಳಿಸಿರುವ 27 ಯೋಜನೆಗಳೊಳಗೆ 16 ಯೋಜನೆಗಳ ಮಟ್ಟಿಗೆ ಅನುದಾನ ಬಿಡುಗಡೆಯಾಗಿ ಗೌರವಧನ ಪಾವತಿಸಲಾಗಿದೆ ಬಳಕೆ ಪತ್ರ ಸಲ್ಲಿಸಿರುವ ಜಿಲ್ಲೆಗಳಿಗೆ ಮರು ಹೊಂದಾಣಿಕೆ ಷರತ್ತಿಗೊಳಪಟ್ಟು ಕರ್ನಾಟಕ ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರದ ವತಿಯಿಂದ ಮೂರು ತಿಂಗಳ ಪ್ರೇರಕರ ಗೌರವಧನವನ್ನು ಪಾವತಿಸಲು ಮುಂಗಡವಾಗಿ ಹಣ ಬಿಡುಗಡೆ ಮಾಡಲು ಕ್ರಮಕೈಗೊಂಡಿದೆ

ಈ) ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆ ಆಗಬೇಕಾಗಿದ್ದು, ಅನುದಾನ ಬಿಡುಗಡೆ ಆದ ಕೂಡಲೇ ಆಯಾ ಜಿಲ್ಲೆಗಳಿಗೆ ಗೌರವಧನವನ್ನು ಪಾವತಿಸಲಾಗುವುದು